# ಪೇರಳೆಗಿದು ಕಾಲ



**ತರಗತಿ ನಡೆಯುವಾಗ ಹಣ್ಣಿನ ವ್ಯಾಪಾರಿಯ ಸೈಕಲ್ ಬೆಲ್ ಕೇಳಿಸಿದರೆ, ಬೋರ್ಡ್ ಹಾಗೂ ಪುಸ್ತಕದಲ್ಲಿನ ಕನ್ನಡ ಪದಗಳಲ್ಲಿನ ಅಕ್ಷರಗಳೆಲ್ಲ ದುಂಡು ದುಂಡಾದ ಪೇರಲೆ ಹಣ್ಣುಗಳಂತೆ ಕಾಣಿಸುತ್ತಿದ್ದವು.**

**■ ಡಾ. ಲಕ್ಷ್ಮಣ ವಿ.ಎ.**

ಶಾಲೆ ಶುರುವಾಗುವ ಸಮಯಕೆ ಮಳೆಯೊ
ಮಳೆಗಾಲ ಶುರುವಾಗುವ ಹೊತ್ತಿಗೆ ಶಾಲೆಯೊ
ಮೂಡಣದಿಂದ ಪಡುವಣಕೆ
ಸಾಲು ಸಾಲಾಗಿ ಬೆನ್ನಿಗೆ ಬ್ಯಾಗು ಹಾಕಿಕೊಂಡ
ತೇಲುವ ಕರಿ ಮೋಡಗಳ ಮುಗಿಲು
ಮೊದಲದಿನ ಶಾಲೆಗೆ ತಡವಾಗಿ
ಬಂದ ಕಂದನ ಕಣ್ಣ ದಿಗಿಲು...

ನಮ್ಮ ಶಾಲಾದಿನಗಳ ಈ ಸಾಲುಗಳೊಂದಿಗೆ, ಕೊರೊನಾ ಕಾಲಘಟ್ಟದಲ್ಲಿ ಬಾಗಿಲು ಮುಚ್ಚಿರುವ ಇಂದಿನ ಶಾಲೆಗಳನ್ನು ನೆನಪಿಸಿಕೊಂಡರೆ ಮನಸ್ಸು ಖಿನ್ನವಾಗುತ್ತದೆ. ಬಾಗಿಲು ತೆರೆಯದ ಶಾಲೆಗಳು ಮಕ್ಕಳ ಚಿಲಿಪಿಲಿಗೆ ಹಂಬಲಿಸುತ್ತಿರುವಂತೆ ಭಾಸವಾಗುತ್ತದೆ. ಮಕ್ಕಳ ಕಲರವವಿಲ್ಲದೆ ಭಯ ಹುಟ್ಟಿಸುವ ಶಾಲೆಯ ಮೌನ ಆವರಣಗಳು, ಖಾಲಿ ತರಗತಿಗಳು, ಅನುರಣನಗೊಳ್ಳದ ಪ್ರಾರ್ಥನೆ, ಹಾರದ ಧ್ವಜ...

ಈ ಹೊತ್ತಿನ ಶೈಕ್ಷಣಿಕ ವಾತಾವರಣವನ್ನು ಕಲ್ಪಿಸಿಕೊಳ್ಳುತ್ತ ಮನಸ್ಸು ಭೂತಕಾಲಕ್ಕೆ ಜಿಗಿಯುತ್ತದೆ. ಬಾಲ್ಯದಲ್ಲಿ ಹೊಸ ಪುಸ್ತಕ, ಹೊಸ ಸ್ಲೇಟಿನ ಸಡಗರ ನೆನಪಾಗುತ್ತದೆ. ಜಾಂಬಳೀಕಾಯಿ (ನೇರಳೆ), ಪೇರೂಕಾಯಿ (ಪೇರಳೆ, ಸೀಬೆ) ಬುಟ್ಟಿಗಳನ್ನು ಸೈಕಲ್ ಮೇಲಿರಿಸಿಕೊಂಡು ಬರುತ್ತಿದ್ದ ಹಣ್ಣುಮಾರುವವರು ನೆನಪಾಗುತ್ತಾರೆ. ದೂರದಲ್ಲೆಲ್ಲೋ ಸೈಕಲ್ ಬೆಲ್ಲಾದರೆ ನಮ್ಮ ಕಣ್ಣೆದುರು ಪೇರಳೆ ನೇರಳೆಗಳೇ ಸುಳಿಯುತ್ತಿದ್ದವು. ಈಗಿನಂತೆ ಆಗ ಮಧ್ಯಾಹ್ನದ ಬಿಸಿಯೂಟ ಇರುತ್ತಿರಲಿಲ್ಲವಾದುದರಿಂದ ಆ ಹಣ್ಣುಗಳೇ ನಮ್ಮ ಪಾಲಿನ ತಿಂಡಿ ಊಟ. ಪೇರಲ ಹಣ್ಣಿನ ಘಮಕ್ಕಂತೂ ನಮ್ಮ ಚಿತ್ತ ಕಲಕಿ ಯಾವಾಗ ಊಟಕ್ಕೆ ಬಿಡುವರೋ ಎನ್ನಿಸುತ್ತಿತ್ತು. ಬೋರ್ಡ್ ಹಾಗೂ ಪುಸ್ತಕದಲ್ಲಿನ ಕನ್ನಡ ಪದಗಳ ದುಂಡಾದ ಅಕ್ಷರಗಳಲ್ಲಿ ದುಂಡು ದುಂಡಾದ ಪೇರಲೆ